

# ಒಂದು ಶ್ರಾವಣ ಸಂಜೆ

ಶ್ರಾವಣದ ಸಂಜೆ ತುಳಸಿ ಕಟ್ಟೆಯ ಮೇಲೆ ಇವಳಿಟ್ಟ
ದೀಪ ಉರಿದಂತಿದೆ ಅವಳ ಹಣೆಯ ಕುಂಕುಮದಲಿ
ಗೂಡು ಸೇರುವ ಹಕ್ಕಿಗಳೆಲ್ಲ ನನ್ನೆದೆಗೆ ಬಂದು
ಮತ್ತೆ ಕೊಟ್ಟಂತೆ ಮರಿಗಳಿಗೆ ತುತ್ತು ಕೊಕ್ಕಿನಲ್ಲಿ

ದೂರದಲಿ ರೈಲಿನ ಸದ್ದು ಅದನೆ ಕಾಯುತಲಿರುವ
ನೆರೆಮನೆಯ ಪ್ರೇಮಕ್ಕ ಕಣ್ಣರಳಿಸಿ
ಶ್ರಾವಣವೇ ಆಗಿದ್ದಾಳೆ ಬರುವ ಮೊಮ್ಮಗನ ನಗು
ನನ್ನ ತುಟಿಗಳರಲಿ ಬರಲಿ ಹುಲ್ಲಾಗಿ

ನಾನು ಕೇಳಿದೆ ಇವಳ ಅಮೆರಿಕೆಯಲ್ಲಿರುವ
ನಮ್ಮ ಮೊಮ್ಮಗ ಈಗ ಹೆಜ್ಜೆ ಇಡಲು
ನಿನ್ನೆ ಕಲಿತಿಹನಂತೆ ಅವನ ಕೈಕೈಹಿಡಿದು
ನಾವು ನಡೆಸಬಹುದಿತ್ತಲ್ಲ ಅವನಿಲ್ಲಿ ಇರಲು

ಇವಳ ಮುಖದಲಿ ಇದ್ದ ಸಂಜೆ ಬಿಸಿಲಿನ ಹೂವು
ಸೂರ್ಯನೊಂದಿಗೆ ಕಂತಿದಂತಾಗೆ ಇವಳು
ಆದರೂ ಹೇಳಿದಳು ನಮ್ಮನೆಯ ನಾಯಿ ಬೆಕ್ಕುಗಳ
ಕಣ್ಣುಗಳಲಿದ್ದೇವಲ್ಲ ನಾವು, ಸಾಕು

● ಡಾ. ನಾ. ಮೊಗಸಾಲೆ

